**ಡಿಡಬ್ಲ್ಯೂ-1** **ಓ.ಎಸ್.ನಂ.791/2008**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.03.11.2025**

## ಮುಂದುವರಿದ ಪಾಟಿ ಸವಾಲುಃ ವಾದಿಗಳ ಪರ ಶ್ರೀ.ಎನ್ ಎಮ್ ಎಮ್ ವಕೀಲರಿಂದಃ

1. ನಾನು ಚಾರ್ಟೆಡ್ ಅಕೌಟೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನಾಗಲೀ ಅಥವಾ ನಮ್ಮ ಕುಟುಂಬದವರಾಗಲಿ ವ್ಯವಸಾಯ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮೊದಲು ಬಾರಿಗೆ ನಾನು ಸುಮಾರು 2005 ನೇ ಸಾಲಿನಲ್ಲಿ ನೋಡಿರುತ್ತೇನೆ. ದಾವಾ ಆಸ್ತಿಯು ಮಾರಟಕ್ಕಿರುವ ಬಗ್ಗೆ ನನಗೆ 2003-04 ನೇ ಸಾಲಿನಿಂದ ನನಗೆ ಗೊತ್ತಿತ್ತು. ದಾವಾ ಆಸ್ತಿಯು ಮಾರಟಕ್ಕಿರುವ ಬಗ್ಗೆ ಕ್ರಯ ಪತ್ರದಲ್ಲಿ ಸಾಕ್ಷಿಯಾಗಿ ಸಹಿ ಮಾಡಿರುವ ತಿಮ್ಮರಾಯಪ್ಪ ಎಂಬುವವರು ನನಗೆ ಹೇಳಿರುತ್ತಾರೆ. ಸದರಿ ತಿಮ್ಮರಾಯಪ್ಪ ರವರ ವಿಳಾಸ ಈಗ ನನಗೆ ನೆನಪಿರುವುದಿಲ್ಲ. ನಿಡಿ-1 ಕ್ರಯ ಪತ್ರವಾಗುವ ಸಂದರ್ಬದಲ್ಲಿ ದಾವಾ ಆಸ್ತಿಯ ದಾಖಲೆಗಳು ಅದರ ಮಾಲಿಕರ ಹೆಸರಿನಲ್ಲಿ ಇತ್ತು. ಇಂದಿಗೂ ಸಹ ದಾವಾ ಆಸ್ತಿಯ ದಾಖಲೆಗಳು ತಿಮ್ಮರಾಯಪ್ಪ ರವರ ಹೆಸರಿನಲ್ಲಿ ಮುಂದುವರೆದಿದೆ ಎಂದರೆ ಸರಿಯಲ್ಲ.

2. ವಾದಿಯು ಸಲ್ಲಿಸಿರುವ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ನಿಡಿ-1 ಕ್ರಯ ಪತ್ರ ಆಗುವ ಸಮಯದಲ್ಲಿ ನಾನು ನೋಡಿದ ವಂಶವೃಕ್ಷ ನಿಪಿ-1 ವಂಶವೃಕ್ಷ ಆಗಿರುವುದಿಲ್ಲ. ನಾನು ನಿಡಿ-1 ಕ್ರಯ ಪತ್ರ ಆಗುವ ಸಮಯದಲ್ಲಿ ವಾದಿಯ ಕುಟುಂಬದ ವಂಶವೃಕ್ಷವನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಯನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ಹಿಂದಿನ ಪಾಟಿ ಸವಾಲಿನಲ್ಲಿ ತಿಳಿಸಿರುವಂತೆ ದಾಖಲೆಗಳು ನನ್ನಲ್ಲಿ ಇದ್ದರೆ ಹಾಜರು ಮಾಡಲು ಪ್ರಯತ್ನ ಮಾಡುತ್ತೇನೆ. ನನ್ನ ಬಳಿ ಯಾವ ದಾಖಲೆ ಇದೆ ಎಂದು ಈಗ ನನಗೆ ನೆನಪಿರುವುದಿಲ್ಲ. ನನ್ನ ಬಳಿ ದಾವಾ ಸ್ವತ್ತಿಗೆ ಸಂಬಂದಿಸಿದ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ.

3. ನಿಡಿ-1 ರಲ್ಲಿ ತೋರಿಸಿರುವ 10 ಸಾವಿರ ರೂಗಳ ಚೆಕ್ ನ್ನು ಮಾಲಿಕರಾದ ತಿಮ್ಮಕ್ಕ ರವರ ಹೆಸರಿಗೆ ನೀಡಿರುತ್ತೇನೆ. 10 ಸಾವಿರ ರೂಗಳ ಚೆಕ್ ನ್ನು ಮಾಲಿಕರಾದ ತಿಮ್ಮಕ್ಕ ರವರ ಹೆಸರಿಗೆ ನೀಡಿರುವ ಬಗ್ಗೆ ನಿಡಿ-1 ರಲ್ಲಿ ನಮೂದು ಮಾಡಿಸಲು ನನಗೆ ತೊಂದರೆ ಇರಲಿಲ್ಲ. ನಿಡಿ-1 ರಲ್ಲಿ ತೋರಿಸಿರುವ ಎಲ್ಲಾ ಹಣ ತಿಮ್ಮಕ್ಕ ರವರಿಗೆ ಹೋಗಿರುತ್ತದೆ. ನಿಡಿ-1 ರಲ್ಲಿ ಒಂದು ಲಕ್ಷದ 50 ಸಾವಿರ ರೂಪಾಯಿಗಳನ್ನು ಶ್ರೀಧರ್ ಎಂಬುವವರಿಗೆ ತೋರಿಸಿದ್ದು, ಸದರಿ ಶ್ರೀಧರ್ ಮತ್ತು ತಿಮ್ಮಕ್ಕ ಎಂಬುವವರ ಮಧ್ಯೆ ದಾವಾ ಸ್ವತ್ತಿಗೆ ಸಂಬಂದಿಸಿ ವಿವಾಧ ಇದ್ದು, ಈ ವಿಚಾರವಾಗಿ ರಾಜಿ ಆಗಿದ್ದು, ಆ ಉದ್ದೇಶಕ್ಕೆ ಆ ಹಣ ಶ್ರೀಧರ್ ರವರಿಗೆ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಶ್ರೀಧರ್ ರವರು ದೇವಸ್ಥಾನದ ಅರ್ಚಕರು ಆಗಿರಬಹುದು. ಸದರಿ ಶ್ರೀಧರ್ ಮತ್ತು ತಿಮ್ಮಕ್ಕ ರವರ ಮಧ್ಯೆದಲ್ಲಿ ಭೋಗ್ಯದ ವಿಚಾರವಾಗಿ ತಕರಾರು ಇತ್ತು. ಈ ಬಗ್ಗೆ ದಾಖಲೆಯನ್ನು ನಾನು ಪರಿಶೀಲಿಸಿರುತ್ತೇನೆ. ಸದರಿ ವಿವಾಧ ನ್ಯಾಯಾಲಯದಲ್ಲಿತೋ್ತ ಅಥವಾ ಇಲ್ಲವೋ ಎಂದು ನನಗೆ ನೆನಪಿರುವುದಿಲ್ಲ. ಸದರಿ ಶ್ರೀಧರ್ ರವರನ್ನು ಸಾಧ್ಯವಾದರೆ ನ್ಯಾಯಾಲಯಕ್ಕೆ ಕರೆಸಲು ಪ್ರಯತ್ನ ಮಾಡುತ್ತೇನೆ.

ಸದರಿ ಶ್ರೀಧರ್ ರವರನ್ನು ನಿಡಿ-1 ಕ್ರಯ ಪತ್ರದಲ್ಲಿ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅದರ ಅಗತ್ಯ ಇರಲಿಲ್ಲ ಎಂದು ನುಡಿಯುತ್ತಾರೆ.

4. ದಾವಾ ಆಸ್ತಿಯನ್ನು ಲಪಟಾಯಿಸಲು ಶ್ರೀಧರ್ ಎಂಬ ವ್ಯಕ್ತಿಯನ್ನು ನಾನೇ ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.79 ರಲ್ಲಿ ವಾದಿ ಮತ್ತು ಅವರ ಕುಟುಂಬದವರಿಗೆ ಬೇರೆ ಆಸ್ತಿ ಇರುವುದಿಲ್ಲ, ಸಾಕ್ಷಿ ಮುಂದುವರಿದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂದಿಸಿದಂತೆ ನಾನು ಕಂದಾಯ ಪಾವತಿ ಮಾಡಿರುತ್ತೇನೆ. ಈ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಹುಡುಕಿ ಇದ್ದರೆ ಹಾಜರು ಮಾಡುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನಾನು ಸ್ವಾದೀನ ಇರುವ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಖರೀದಿ ಮಾಡುವ ಮೊದಲು ಪತ್ರಿಕಾ ಪ್ರಕಟಣೆ ನೀಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅದರ ಅಗತ್ಯ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವ ಮೊದಲು ಅಕ್ಕ ಪಕ್ಕದವರನ್ನು ವಿಚಾರಣೆ ಮಾಡಿದ್ದೇನೆ ಎಂದು ಹೇಳಿದ್ದು, ಅವರುಗಳ ಹೆಸರು ಈಗ ನನಗೆ ನೆನಪಿರುವುದಿಲ್ಲ. ಅವರುಗಳನ್ನು ನ್ಯಾಯಾಲಯಕ್ಕೆ ಕರೆಸಲು ಪ್ರಯತ್ನ ಮಾಡುತ್ತೇನೆ. ನಿಡಿ-1 ಕ್ರಯ ಪತ್ರವನ್ನು ವಕೀಲರಾದ ಶಶಿ ಪಾಟೇಲ್ ಎಂಬುವವರು ತಯಾರು ಮಾಡಿರುತ್ತಾರೆ. ಸದರಿ ಶಶಿ ಪಾಟೇಲ್ ರವರು ಈಗ ಎಲ್ಲಿ ಇದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ, ಅವರನ್ನು ನ್ಯಾಯಾಲಯಕ್ಕೆ ಕರೆಸಲು ಪ್ರಯತ್ನ ಮಾಡುತ್ತೇನೆ. ನಿಡಿ-1 ರಲ್ಲಿ ತೋರಿಸಿರುವ ಶ್ರೀಧರ್ ಮತ್ತು ವಕೀಲರೆಂದು ಹೇಳಿರುವ ಶಶಿ ಪಾಟೇಲ್ ಎಂಬ ವ್ಯಕ್ತಿಗಳು ಇಲ್ಲ, ಅವರನ್ನು ನಾನು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಾದಿ ಪರ ಕೋರಿಕೆಯ ಮೇರೆಗೆ ಮುಂದುವರಿದ ಪಾಟಿ ಸವಾಲಿಗೆ ಸಮಯ ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**